# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 161 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶೌಚಾಲಯ, ಶುದ್ಧ ಕುಡಿಯುವ ನೀರು, ವಿದ್ಯುತ್ ಮತ್ತು ಆಟದ ಮೈದಾನದಂತಹ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವ ಶಾಲೆಗಳ ಸಮೀಕ್ಷೆ ಮಾಡಲಾಗಿದೆಯೇ; ಮಾಡಿದ್ದಲ್ಲಿ ಕೊರತೆ ಇರುವ ಶಾಲೆಗಳ ಸಂಖ್ಯೆ ಎಷ್ಟು; ಯಾವ ಯಾವ ಸೌಲಭ್ಯಗಳಲ್ಲಿ ಎಷ್ಟು ಕೊರತೆ ಕಂಡುಬಂದಿದೆ ಎಂಬ ವಿವರವನ್ನು ನೀಡುವುದು; (ಜಿಲ್ಲಾವಾರು ಮಾಹಿತಿ ಒದಗಿಸುವುದು); | ಇಲಾಖೆಯ ತಂತ್ರಾಂಶ (SATS/U-DISE+) ಹಾಗೂ ಕ್ಷೇತ್ರ ಮಟ್ಟದ ಅಧಿಕಾರಿಗಳ ಮೂಲಕ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯಂತೆ ಮೂಲಭೂತ ಸೌಲಭ್ಯಗಳ ಕೊರತೆ ಬಗ್ಗೆ ನಿಯಮಿತವಾಗಿ ಸಮೀಕ್ಷೆ ನಡೆಸಲಾಗಿದೆ. ಪ್ರಸ್ತುತ ಬಹುತೇಕ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗಿದ್ದು, ರಾಜ್ಯದ ಸರ್ಕಾರಿ ಶಾಲೆಗಳಿಗೆ ಗರಿಷ್ಠ ಮಟ್ಟದ ಮೂಲಸೌಕರ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದ್ದು, ಆಗಾಗ್ಗೆ ಕಂಡುಬರುವ ಕೊರತೆಗಳನ್ನು ಸರಿಪಡಿಸಲು ನಿರಂತರವಾಗಿ ಪರಿಶೀಲಿಸಿ ಅಗತ್ಯ ಕ್ರಮ ವಹಿಸಿದೆ.<br><br>ಶಾಲಾ ಮುಖ್ಯಸ್ಥರು SATS ನಲ್ಲಿ ಅಳವಡಿಸಿದ ಮಾಹಿತಿಯಂತೆ ಮೂಲಭೂತ ಸೌಲಭ್ಯಗಳ ಕೊರತೆ ಇರುವ ಶಾಲೆಗಳ ಜಿಲ್ಲಾವಾರು ಅಂಕಿ-ಅಂಶಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ. |
| ಇ) | ಸದರಿ ಶಾಲೆಗಳಲ್ಲಿನ ಮೂಲಸೌಲಭ್ಯಗಳ ಕೊರತೆಯನ್ನು ಸಂಪೂರ್ಣವಾಗಿ ನಿವಾರಿಸಲು ಸರ್ಕಾರ | ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಕರ್ಯ /ಸೌಲಭ್ಯಗಳ ಕೊರತೆಯನ್ನು ಗುರುತಿಸಿ ನಿವಾರಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ಈ |

| | | |
|---|---|---|
| | ಕಾಲಬದ್ಧ ಕಾರ್ಯಕ್ರಮ ರೂಪಿಸಿರುವುದೇ; ಇದ್ದಲ್ಲಿ, ಅದರ ವಿವರ ಹಾಗೂ ಪೂರ್ಣಗೊಳಿಸಲು ತೆಗೆದುಕೊಂಡ ಕಾಲಮಿತಿ ಎಷ್ಟು | ಸಂಬಂಧ ಪ್ರತಿ ವರ್ಷ ರಾಜ್ಯ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಮತ್ತು ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳಡಿ ಮಂಜೂರಾಗುವ ಅನುದಾನದಲ್ಲಿ, ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br><br>ರಾಜ್ಯ ವಲಯದ ಅನುದಾನದಡಿಯಲ್ಲಿನ ಈ ಕೆಳಕಂಡ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>• ನೂತನ ಶಾಲಾ ಕೊಠಡಿಗಳ ನಿರ್ಮಾಣ.<br>• ಶಾಲಾ ಕೊಠಡಿಗಳ ದುರಸ್ತಿ.<br>• ಶಾಲಾ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ.<br>• ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಈ ಕೆಳಕಂಡ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>• ನೂತನ ಶಾಲಾ ಕೊಠಡಿಗಳ ನಿರ್ಮಾಣ.<br>• ಶಾಲಾ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ.<br>• ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು.<br>• ಕುಡಿಯುವ ನೀರು<br><br>CEPMIZ ಯೋಜನೆಯಡಿ ಗಣಿಬಾಧಿತ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.<br><br>ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಗಳ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಅಗತ್ಯತೆ ಮತ್ತು ಅರ್ಹತೆಯಂತೆ |

| | | |
|---|---|---|
| | | ಕೆ.ಕೆ.ಆರ್.ಡಿ.ಬಿ. ಅನುದಾನದಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.<br>ಸಮುದಾಯ ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CCSR) ಕಾರ್ಯಕ್ರಮದಡಿ ಅನೇಕ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶ ಕಲ್ಪಿಸಲಾಗಿದೆ.<br>ಹಿಂದಿನ ಸಾಲುಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಒದಗಿಸಲಾಗಿರುವ ಅನುದಾನದ ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಲಾಗಿದೆ. |
| ಈ) | ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸರ್ಕಾರಿ ಶಾಲೆಗಳ ಮೂಲಸೌಕರ್ಯದಲ್ಲಿ ಇರುವ ವ್ಯತ್ಯಾಸಗಳ ಕುರಿತು ಸರ್ಕಾರ ಅಧ್ಯಯನ ನಡೆಸಿದೆಯೇ; ನಡೆಸಿದ್ದಲ್ಲಿ, ಅದರ ವರದಿ ಹಾಗೂ ಕೈಗೊಂಡಿರುವ ಕ್ರಮಗಳು ಯಾವುವು? | ಗ್ರಾಮೀಣ ಪ್ರದೇಶದಲ್ಲಿನ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಯಾವುದೇ ತಾರತಮ್ಯವನ್ನು ಮಾಡಲಾಗುವುದಿಲ್ಲ. ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸರ್ಕಾರಿ ಶಾಲೆಗಳ ಮೂಲಸೌಕರ್ಯದ ಕುರಿತು ರಾಜ್ಯದ ಎಲ್ಲಾ ಶಾಲಾ ಮುಖ್ಯ ಶಿಕ್ಷಕರಿಂದಲೇ ಮಾಹಿತಿ ಪಡೆದು ಮೂಲಸೌಕರ್ಯದಲ್ಲಿ ಇರುವ ವ್ಯತ್ಯಾಸಗಳನ್ನು ಪರಿಶೀಲಿಸಿ, ಸರ್ಕಾರಿ ಶಾಲೆಗಳಿಗೆ ಮಕ್ಕಳ ಸಂಖ್ಯೆಯಂತೆ ಅಗತ್ಯತೆ, ಅರ್ಹತೆ ಮತ್ತು ಅನುದಾನ ಲಭ್ಯತೆಗೆ ಅನುಗುಣವಾಗಿ ಅವಶ್ಯವಿರುವ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಿದೆ. |

ಸಂಖ್ಯೆ: ಇಪಿ 224 ಯೋಸಕ 2026

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ-1

ಅನುಬಂಧ-1

| Slno | District | Schools | Class rooms count | | | | Schools count | | Drinking water | | Eletricity | | Playground | | Compund wall | |
|---|---|---|---|---|---|---|---|---|---|---|---|---|---|---|---|---|
| | | | Total | Good | Minor repair | Majar Repair | Toilets Funtional | Toilets Dys Funtional | Funtional | Dis Funtional | Funtional | Dis Funtional | Available | Not Available | Available | Not Available |
| 1 | BAGALKOT | 1424 | 9449 | 6961 | 1232 | 1256 | 1421 | 3 | 1424 | 0 | 1414 | 10 | 901 | 523 | 1281 | 143 |
| 2 | BALLARI | 720 | 5588 | 3858 | 679 | 1051 | 707 | 13 | 719 | 1 | 697 | 23 | 288 | 432 | 619 | 101 |
| 3 | BELAGAVI | 1480 | 9415 | 6880 | 1392 | 1143 | 1480 | 0 | 1480 | 0 | 1480 | 0 | 885 | 595 | 1311 | 169 |
| 4 | BELAGAVI CHIKKODI | 1913 | 11506 | 8647 | 1378 | 1481 | 1913 | 0 | 1912 | 1 | 1906 | 7 | 1757 | 156 | 1705 | 208 |
| 5 | BENGALURU RURAL | 1081 | 4546 | 3759 | 389 | 398 | 1081 | 0 | 1081 | 0 | 1081 | 0 | 711 | 370 | 1009 | 72 |
| 6 | BENGALURU U NORTH | 534 | 3869 | 3337 | 280 | 252 | 534 | 0 | 534 | 0 | 533 | 1 | 261 | 273 | 481 | 53 |
| 7 | BENGALURU U SOUTH | 928 | 5989 | 5288 | 430 | 271 | 928 | 0 | 927 | 1 | 928 | 0 | 383 | 545 | 856 | 72 |
| 8 | BIDAR | 1372 | 8750 | 6461 | 1192 | 1097 | 1354 | 18 | 1365 | 7 | 1256 | 116 | 669 | 703 | 1172 | 200 |
| 9 | CHAMARAJANAGARA | 800 | 4115 | 2597 | 775 | 743 | 800 | 0 | 800 | 0 | 792 | 8 | 429 | 371 | 740 | 60 |
| 10 | CHIKKABALLAPURA | 1471 | 5915 | 4120 | 831 | 964 | 1471 | 0 | 1471 | 0 | 1470 | 1 | 704 | 767 | 1265 | 206 |
| 11 | CHIKKAMANGALURU | 1352 | 6384 | 4518 | 986 | 880 | 1352 | 0 | 1352 | 0 | 1351 | 1 | 1001 | 351 | 1263 | 89 |
| 12 | CHITRADURGA | 1717 | 7936 | 5073 | 1164 | 1699 | 1714 | 3 | 1717 | 0 | 1709 | 8 | 977 | 740 | 1556 | 161 |
| 13 | DAKSHINA KANNADA | 1054 | 6603 | 4834 | 966 | 803 | 1054 | 0 | 1054 | 0 | 1054 | 0 | 978 | 76 | 955 | 99 |
| 14 | DAVANAGERE | 1187 | 6721 | 4752 | 768 | 1201 | 1187 | 0 | 1187 | 0 | 1185 | 2 | 908 | 279 | 1130 | 57 |
| 15 | DHARWAD | 845 | 6749 | 5018 | 861 | 870 | 842 | 3 | 843 | 2 | 840 | 5 | 544 | 301 | 783 | 62 |
| 16 | GADAG | 696 | 5233 | 4115 | 609 | 509 | 696 | 0 | 695 | 1 | 695 | 1 | 505 | 191 | 638 | 58 |
| 17 | HASSAN | 2345 | 9260 | 5903 | 1648 | 1709 | 2345 | 0 | 2345 | 0 | 2339 | 6 | 1232 | 1113 | 2007 | 338 |
| 18 | HAVERI | 1283 | 7678 | 5594 | 1007 | 1077 | 1283 | 0 | 1283 | 0 | 1282 | 1 | 861 | 422 | 1135 | 148 |
| 19 | KALBURGI | 1985 | 13343 | 9298 | 1669 | 2376 | 1980 | 5 | 1983 | 2 | 1950 | 35 | 968 | 1017 | 1679 | 306 |
| 20 | KODAGU | 403 | 2297 | 1684 | 300 | 313 | 403 | 0 | 403 | 0 | 400 | 3 | 363 | 40 | 382 | 21 |
| 21 | KOLAR | 1853 | 6955 | 4929 | 962 | 1064 | 1847 | 6 | 1851 | 2 | 1844 | 9 | 539 | 1314 | 1689 | 164 |
| 22 | KOPPAL | 1074 | 7909 | 5940 | 816 | 1153 | 1067 | 7 | 1069 | 5 | 1048 | 26 | 591 | 483 | 1007 | 67 |
| 23 | MANDYA | 1673 | 8332 | 5572 | 1330 | 1430 | 1673 | 0 | 1673 | 0 | 1672 | 1 | 1123 | 550 | 1575 | 98 |
| 24 | MYSURU | 2048 | 10713 | 7491 | 1616 | 1606 | 2048 | 0 | 2048 | 0 | 2048 | 0 | 1814 | 234 | 1987 | 61 |
| 25 | RAICHUR | 1600 | 10028 | 7708 | 978 | 1342 | 1595 | 5 | 1599 | 1 | 1582 | 18 | 653 | 947 | 1489 | 111 |
| 26 | RAMANAGARA | 1217 | 4620 | 3270 | 562 | 788 | 1217 | 0 | 1217 | 0 | 1215 | 2 | 471 | 746 | 1080 | 137 |
| 27 | SHIVAMOGGA | 1934 | 8897 | 6907 | 1004 | 986 | 1933 | 1 | 1933 | 1 | 1932 | 2 | 1473 | 461 | 1791 | 143 |
| 28 | TUMAKURU | 2037 | 8029 | 5370 | 1195 | 1464 | 2030 | 7 | 2036 | 1 | 2035 | 2 | 822 | 1215 | 1786 | 251 |
| 29 | TUMAKURU MADHUGIRI | 1298 | 5298 | 3663 | 644 | 991 | 1297 | 1 | 1298 | 0 | 1293 | 5 | 682 | 616 | 1194 | 104 |
| 30 | UDUPI | 654 | 4062 | 2938 | 644 | 480 | 654 | 0 | 654 | 0 | 654 | 0 | 614 | 40 | 581 | 73 |
| 31 | UTTARA KANNADA | 955 | 3998 | 2836 | 631 | 531 | 955 | 0 | 955 | 0 | 955 | 0 | 483 | 472 | 842 | 113 |
| 32 | UTTARA KANNADA SIRSI | 1158 | 4658 | 3196 | 690 | 772 | 1158 | 0 | 1158 | 0 | 1158 | 0 | 897 | 261 | 984 | 174 |
| 33 | VIJAYANAGARA | 1048 | 7324 | 5357 | 819 | 1148 | 1041 | 7 | 1048 | 0 | 1029 | 19 | 474 | 574 | 951 | 97 |
| 34 | VIJAYAPURA | 1939 | 11095 | 8333 | 1241 | 1521 | 1933 | 6 | 1937 | 2 | 1848 | 91 | 1538 | 401 | 1769 | 170 |
| 35 | YADAGIRI | 1034 | 6423 | 4734 | 720 | 969 | 1030 | 4 | 1027 | 7 | 980 | 54 | 417 | 617 | 814 | 220 |
| | Grand Total | 46112 | 249687 | 180941 | 32408 | 36338 | 46023 | 89 | 46078 | 34 | 45655 | 457 | 27916 | 18196 | 41506 | 4606 |

Source:SATS Mar 18, 2026 report

DD PLANNING

**ಅನುಬಂಧ-2**

## ಶಾಲಾ ಕೊಠಡಿಗಳ ವಿವರ

- ಕಳೆದ 3 ವರ್ಷಗಳಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ

**ಹೊಸ ಕೊಠಡಿಗಳ ನಿರ್ಮಾಣದ ವಿವರ:**

| ಕ್ರ. ಸಂ. | ಯೋಜನೆ ಮಂಜೂರಾದ ವರ್ಷ | ಯೋಜನೆ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ವರ್ಷ | ಬಿಡುಗಡೆ ಮಾಡಲಾದ ಅನುದಾನ ರೂ.ಲಕ್ಷಗಳಲ್ಲಿ |
|---|---|---|---|---|---|---|
| 1 | 2022-23 | ವಿವೇಕ | 5435 | 77682.58 | 2022-23 | 46901.84 |
| | | | | | 2023-24 | 16960.63 |
| | | | | | 2024-25 | 11462.11 |
| 2 | 2023-24 | ವಿವೇಕ | 159 | 2342.6 | 2024-25 | 2342.60 |
| 3 | 2024-25 | ರಾಜ್ಯ ವಲಯ ಯೋಜನೆ | 784 | 11529.65 | 2024-25 | 11529.65 |
| ಒಟ್ಟು | | | **6378** | **91,554.83** | | **89,196.83** |

## ಶಾಲಾ ಕೊಠಡಿಗಳ ದುರಸ್ತಿ ವಿವರ :-

- ಕಳೆದ 4 ವರ್ಷಗಳಲ್ಲಿ ಶಾಲಾ ಕೊಠಡಿಗಳ ದುರಸ್ತಿ ಕಾರ್ಯಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

| ವರ್ಷ | ಮಂಜೂರಾದ ಶಾಲೆಗಳು | ಮಂಜೂರಾದ ಅನುದಾನ(ರೂ.ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 2022-23 | 1878 | 4850 | 4850 |
| 2023-24 | 2162 | 7000 | 7000 |
| 2024-25 | 5744 | 15129.66 | 15129.66 |
| 2025-26 | 7293 | 10000 | 9688.89 |
| ಒಟ್ಟು | 17077 | 36,979.66 | 36,668.55 |

## ಶಾಲಾ ಶೌಚಾಲಯ ನಿರ್ಮಾಣ :-

- ನರೇಗಾ ಸಹಯೋಗದೊಂದಿಗೆ ರಾಜ್ಯವಲಯ ಯೋಜನೆಯಡಿ ಕಳೆದ 4 ವರ್ಷಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ. | ವರ್ಷ | ಮಂಜೂರಾದ ಶಾಲೆಗಳು | ಶೌಚಾಲಯಗಳ ಸಂಖ್ಯೆ | ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ |
|---|---|---|---|---|
| 01 | 2022-23 | 6962 | 7650 | 3500.00 |
| 02 | 2023-24 | | | 8000.00 |
| 03 | 2024-25 | | | 12106.65 |
| 04 | 2025-26 | 1250 | 1582 | 6328.00 |
| | ಒಟ್ಟು | **8212** | **9232** | **29934.65** |

**ಶಾಲಾ ಪೀಠೋಪಕರಣ:-**

- 2022-23ನೇ ಸಾಲಿನಲ್ಲಿ KSFIC ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳ ಹಂತದಲ್ಲಿ 5401 ಶಾಲೆಗಳಿಗೆ ಪೀಠೋಕರಣ ಸರಬರಾಜು ಮಾಡಲು ರೂ. 70.00 ಕೋಟಿಗಳ ಮತ್ತವನ್ನು ವೆಚ್ಚ ಮಾಡಲಾಗಿದೆ.

- 2025-26ನೇ ಸಾಲಿನಲ್ಲಿ ರೂ.35.00 ಕೋಟಿಗಳಲ್ಲಿ 6348 ಶಾಲೆಗಳಲ್ಲಿ ಡೆಸ್ಕ್‌ಗಳನ್ನು ಒದಗಿಸಲು ಅನುದಾನ ಬಿಡುಗಡೆಯಾಗಿದ್ದು, 3 ಸೀಟರ್‌ನ 22694 ಹಾಗೂ 4 ಸೀಟರ್‌ನ 30991 ಡೆಸ್ಕ್‌ಗಳಂತೆ ಒಟ್ಟು 53685 ಡೆಸ್ಕ್‌ಗಳನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ.

ಉಪನಿರ್ದೇಶಕರು(ಯೋಜನೆ)